# ಪ್ರಧಾನ ಜಿಲ್ಲಾ, ಸತ್ರ ಮತ್ತು ವಿಶೇಷ ನ್ಯಾಯಾಲಯ

# ಬಳ್ಳಾರಿ

## ವಿಶೇಷ ಮೊಕದ್ದಮೆ ಸಂಖ್ಯೆಃ 133/2016

**ಪಿ.ಡಬ್ಲ್ಯೂಃ6 (ಸಿಡಬ್ಲ್ಯೂಃ 15)**

| | | |
|---|---|---|
| **ಸಾಕ್ಷಿದಾರರ ಹೆಸರು** | : | **ಶ್ರೀ ಕೇಣಿಬಸಪ್ಪ** |
| **ತಂದೆಯ ಹೆಸರು** | : | **ವಿರೂಪಣ್ಣ ಕೇಣಿ** |
| **ವಯಸ್ಸು** | : | **63 ವರ್ಷ** |
| **ಕೆಲಸ** | : | **ನಿವೃತ್ತ ಎಕ್ಸಿಕ್ಯೂಟಿವ್ ಆಫೀಸರ್ , ತಾಲೂಕು ಪಂಚಾಯ್ತಿ** |
| **ವಾಸ ಸ್ಥಳ** | : | **ಬಳ್ಳಾರಿ** |

**ಸಾಕ್ಷಿಯನ್ನು ದಿನಾಂಕ 21.12.2024 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ**

ನಾನು 2014 ಜುಲೈ ರಿಂದ ಬಳ್ಳಾರಿಯಲ್ಲಿ ಕಾರ್ಯ ನಿರ್ವಾಹಕ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಚಾಸಾ.6 ನಮ್ಮ ಕಚೇರಿಯಲ್ಲಿ ಎಫ್.ಡಿ.ಎ ಆಗಿ ಕೆಲಸ ಮಾಡುತ್ತಿದ್ದರು. ನನ್ನ ವ್ಯಾಪ್ತಿಯಲ್ಲಿ 40 ಗ್ರಾಮ ಪಂಚಾಯ್ತಿ ಇದ್ದವು. ನ್ಯಾಯಾಲಯದ ಮುಂದಿರುವ ಆರೋಪಿತರನ್ನು ಗುರುತಿಸುತ್ತೇನೆ. 1 ನೇ ಆರೋಪಿ ಈಶ್ವರಯ್ಯ ಅಲಕುಂದಿ ಗ್ರಾಮ ಪಂಚಾಯ್ತಿಯಲ್ಲಿ ಗ್ರೇಡ್ 2 ಕಾರ್ಯದರ್ಶಿ ಆಗಿದ್ದರು ಮತ್ತು 2 ನೇ ಆರೋಪಿ ಪಿಡಿಒ ಆಗಿ ಕೆಲಸ ಮಾಡುತ್ತಿದ್ದರು. ನಮ್ಮ ತಾಲ್ಲೂಕು ಪಂಚಾಯ್ತಿ ಕಚೇರಿ ಬಳ್ಳಾರಿಯ ಕೋಟೆ ನಗರದಲ್ಲಿದೆ.

**2.** ದಿಃ12.1.2015 ರಂದು ನಮ್ಮ ತಾಲೂಕು ಪಂಚಾಯ್ತಿ ಮೀಟಿಂಗ್ ಇದ್ದು ಸುಮಾರು 11.00 ಗಂಟೆ ಸಮಯದಲ್ಲಿ ಮೀಟಿಂಗ್ ನಡೆಯುತ್ತಿತ್ತು. ನಮ್ಮ ಕಚೇರಿಯ

**Spl.C.No. 133/2016**
**P.W.6(C.W.15)**
**Date : 21.12.2024**

ಎಸ್.ಡಿ.ಎ ರವರು ಬಂದು ಲೋಕಾಯುಕ್ತ ಅಧಿಕಾರಿಗಳು ಬಂದಿದ್ದು ನನ್ನನ್ನು ಕರೆಯುತ್ತಿರುವುದಾಗಿ ತಿಳಿಸಿದರು. ಅದರಂತೆ ನಾನು ಲೋಕಾಯುಕ್ತ ಅಧಿಕಾರಿಗಳನ್ನು ಬೇಟಿಯಾಗಿದ್ದೇನೆ. ಮನೆ ಟ್ರಾಕ್ಸ ಗೆ ಸಂಬಂಧಿಸಿದಂತೆ ಲಿಂಗಪ್ಪ ರವರಿಂದ 1 ನೇ ಆರೋಪಿ ಈಶ್ವರಯ್ಯ ರವರು ರೂ.2000/- ಪಡೆದುಕೊಂಡಿದ್ದಾರೆ ಎಂದು ನನಗೆ ತಿಳಿಸಿದ್ದು, ನನ್ನ ಸಮಕ್ಷಮದಲ್ಲಿ ಮಹಜರು ಮಾಡುವುದಾಗಿ ಹೇಳಿದರು.

( ಸಾಕ್ಷಿಯು ನ್ಯಾಯಾಲಯದ ಮುಂದೆ ಸರಿಯಾಗಿ ಸಾಕ್ಷಿ ನುಡಿಯದ ಕಾರಣ ಮುಂದುವರೆದ ಮುಖ್ಯ ವಿಚಾರಣೆಗೆ ಅಭಿಯೋಜಕರು ಸಮಯಾವಕಾಶ ಕೋರಿದ್ದಾರೆ, ಸಮಯಾವಕಾಶ ನೀಡಲಾಯಿತು.)

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)**

**ಓ.ಹೇ.ಕೆ. ಸರಿ ಇದೆ.**

\

**ಪ್ರಧಾನ ಜಿಲ್ಲಾ, ಸತ್ರ ಮತ್ತು ವಿಶೇಷ ನ್ಯಾಯಾಧೀಶರು,**
**ಬಳ್ಳಾರಿ.**